ಮೆಲ್ಲಮೆಲ್ಲನೆ ಕಪ್ಪು ಕಮಲವೋ ಎಂಬಂತೆ ಅವನು ನೋಡಿದ ತೆಲುಗು ಚಿತ್ರವೊಂದರಲ್ಲಿ ಅರಳುವಂತೆಯೇ ಅರಳತೊಡಗಿದಾಗ ಅವನ ಅಚ್ಚರಿ ಇಮ್ಮಡಿಯಾಯಿತು. ಭಯ, ಕುತೂಹಲ, ಅಚ್ಚರಿಯ ಭಾವದಲ್ಲಿ ಒಂದೊಂದೇ ಮೆಟ್ಟಿಲುಗಳನ್ನು ಇಳಿದು ದೃಷ್ಟಿನೆಟ್ಟು ನಿಂತಾಗ ಅದು ಕೋಣವಲ್ಲ, ಕಪ್ಪು ಕಮಲವೂ ಅಲ್ಲ, ಬುರ್ಖಾ ಧರಿಸಿದ ಯಾವುದೋ ದೇಹ ಎಂಬುದರ ಅರಿವಾದದ್ದೇ ತಡ 'ಯಾರೋ ಮುಸ್ಲಿಂ ಹೆಂಗಸು ಕೆರೆಗೆ ಬಿದ್ದು ಸತ್ತಿದ್ದಾರೆ' ಎಂಬ ಸಾಮಾನ್ಯ ಜ್ಞಾನದಿಂದ ಹುಟ್ಟಿದ ಕರುಣೆ, ಕುತೂಹಲ, ದುಃಖ, ಭಯ... ಈ ಮುಂತಾದ ಹತ್ತು ಹಲವು ಭಾವನೆಗಳಿಂದ ನರಳಿ ಒಂದೇ ಬಾರಿಗೆ ಕುಕ್ಕೋಟ ಹಿಡಿದು ಓಡಿದವ ವೆಂಕಟರಮಣ ಗುಡಿಯ ಪೂಜೆಗೆಂದು ಹೊರಟ ನಾರಾಯಣ ಭಟ್ಟರು ಮುಖದ ತುಂಬಾ ಮಂದಹಾಸ ಬೀರಿ, 'ಏನು ಚಿಕ್ಕ ಎಂಜಿನಿಯರ್ ಸಾಹೇಬ್ರು ಓಟಕ್ಕೆ ಹೋಗಿದ್ದಿರಾ?' ಎಂದು ಕೇಳಿದಾಗಲೇ ನಿಂತಿದ್ದು! ಅವರ ಯಾವ ಕ್ರಿಯೆಗೂ ಪ್ರತಿಕ್ರಿಯೆ ವ್ಯಕ್ತಪಡಿಸಲಾರದಂತಹ ಸ್ಥಿತಿಯಲ್ಲಿದ್ದು ತನ್ನ ಪ್ರಜ್ಞೆಗೆ ಘಾತ ತಂದಿದ್ದ ವಿಷಯವನ್ನೇ ಭಾಟಿಯಾ ಒಂದೇ ಬಾರಿಗೆ ಉಸುರಿದ್ದ: 'ನಾರಾಯಣ ಭಟ್‌ರೇ, ಕಪ್ಪು ಕೆರೇಲಿ, ಕಪ್ಪು ಬುರ್ಖಾ ಹಾಕಿರೋ ಒಂದು ಹೆಣ್ಣು ಮಗಳ ಹೆಣ ತೇಲ್ತಾ ಇದೆ.'

ಇದ್ದಕ್ಕಿದ್ದಂತೆ ಭಟ್ಟರ ಮುಖ ಕಪ್ಪಾಗಿ ಹೋಗಿತ್ತು. ಹಿಂದಿನ ಚರಿತ್ರೆಯನ್ನೆಲ್ಲಾ ಕಂಡು, ಕೇಳಿ, ಅನುಭವಿಸಿದ್ದ ಅವರಿಗೆ ಹುಲಿಯೇ ಎದುರು ಬಂದು ನಿಂತಂತಾಗಿ ಗಡಗಡ ನಡುಗಿ ಹೋದರು. ಇದು ಇನ್ನೆಂಥ ಅನಾಹುತಗಳಿಗೆ ಕಾರಣವಾಗುತ್ತದೋ ಎಂದು ಯೋಚಿಸಿದವರು ತುಟಿಗೆ ನಾಲಿಗೆ ಸವರುತ್ತಾ, 'ಬಾಪ್ಪಾ, ಹಿರಿಯರನ್ನ ಮೊದಲು ನೋಡುವಾ' ಎಂದು ಒಂದೇ ಉಸುರಿಗೆ ನರಳಿ ನುಡಿದು, ದಾಪುಗಾಲು ಹಾಕಿಬಿಟ್ಟರು. ಅವರ ಗಡಿಬಿಡಿ, ಗಾಬರಿಯನ್ನು ಕಂಡು ಭಾಟಿಯಾ ತನ್ನ ಅರ್ಧ ಆತಂಕವನ್ನು ಭಟ್ಟರಿಗೆ ವರ್ಗಾಯಿಸಿದೆ ಎಂಬ ಸಮಾಧಾನದಲ್ಲಿ ಸಮಸ್ಥಿತಿಗೆ ಬಂದು ಅವರೊಂದಿಗೇ ತನ್ನ ಹೆಜ್ಜೆ ಸಮಗೊಳಿಸತೊಡಗಿದ.

ಹಾದಿಯಲ್ಲಿ ತಮ್ಮ ಮನೆ ಬಂದಾಗ ಭಟ್ಟರು ತಾವು ಹಿಡಿದಿದ್ದ ಪೂಜಾ ಸಾಮಗ್ರಿಗಳನ್ನು ಭಾಟಿಯಾನ ಕೈಗೇ ಕೊಟ್ಟುಬಿಟ್ಟರು. 'ಮನೇಲಿ ಯಾರು ಇಲ್ಲ. ಶ್ರೀದೇವಿ ಅಕ್ಕನ ಮನೆಗೆ ಹೋಗಿ ಮೂರು ದಿನವಾಯ್ತು, ಇಂಥಾ ಸಮಯದಲ್ಲಿ ಅವಳು ಇಲ್ಲಿ ಇರದೇ ಇರೋದೇ ಒಳ್ಳೇದಾಯ್ತು. ಇದನ್ನ ಹಾಲಿನಲ್ಲಿಟ್ಟು ಬೀಗ ಹಾಕ್ಕೊಂಡು ಹಿರೀಗೌಡರ ಮನೆ ಹತ್ತಿರ ಬಂದುಬಿಡಪ್ಪಾ ಪ್ರಕಾಶ' ಗೋಗರೆದವರಂತೆ ನುಡಿದು ಅವನ ಉತ್ತರಕ್ಕೂ ಕಾಯದೇ ಓಡಿಬಿಟ್ಟರು.

ಭಾಟಿಯ ಭಟ್ಟರು ವಹಿಸಿದ್ದ ಕಾರ್ಯಕ್ರಮವನ್ನು ಮಾಡಿ ಮುಗಿಸಿ ಬರುವ ವೇಳೆಗೆ ಶಿವಲಿಂಗೇಗೌಡರ 24 ಕಂಬದ ಹಟ್ಟಿಯ ಹಜಾರ 40–50 ಮಂದಿಯಿಂದ ತುಂಬಿಹೋಗಿತ್ತು. ಗೌಡರು, ಅವರ ನಾಲ್ಕು ಮಂದಿ ಮಕ್ಕಳು, ಶಾನುಭೋಗ ರಾಜಪ್ಪ, ಛೇರ್ಮನ್ ಮಲ್ಲಪ್ಪ, ಲಕ್ಷ್ಮೀಪತಯ್ಯ ನಾರಾಯಣಭಟ್ಟರು... ಊರಿನ ಪ್ರಮುಖರ ಹಾಜರಿ ಇತ್ತು. ಇಂಥ ಸಮಯದಲ್ಲಾದರೂ ಈ ಊರಿನ ಮಂದಿ ಒಂದಾಗುತ್ತಾರಲ್ಲಾ ಎಂದು ನಕ್ಕ ಭಾಟಿಯಾ ಭಟ್ಟರು ಸರಿದು ಮಾಡಿಕೊಟ್ಟ ಜಾಗದಲ್ಲಿ ಕುಳಿತು, ಅವರಿಗೆ ಬೀಗದ ಕೈ ಕೊಟ್ಟ.

'ನೋಡ್ರಪ್ಪಾ ಕಪ್ಪು ಕೆರೇಲಿ ಒಂದು ಬುರ್ಖಾ ಹಾಕಿರೋ ಹೆಣ್ಣುಮಗಳ ಹೆಣಾ ತೇಲ್ತಾ ಅದಂತೆ, ನಿಮ್ಗೆ ಗೊತ್ತೇ ಅದಲ್ಲಾ ನಮ್ಮೂರಲ್ಲಿ ಏನಾಗಲಿ, ಏನಾಗದೇ ಇರ್ಲಿ ಇಂಥಾ ಸಮಯದಾಗೆ ರಕ್ತದ್ ಹೊಳೆ ಹರ್‍ದುಹೋಯ್ತದೇಂತ. ನಮ್ಗೆ ಏನಾದ್ರೂ ಕಿಸ್ರಾದರೆ ಹರಾಶಿವಾ ಅನ್ನದೆ ಅವರ ಜನಾನಾ ಕೊಚ್ಚಾದು, ತರಿಯಾದು, ಬಣವೆಗೆ, ಹಟ್ಟೀಗೆ ಬೆಂಕಿ ಹಚ್ಚಿ ಉರ್‍ಸಾದು.